# ಕವಲುದಾರಿಗಳ ಪಯಣದಲ್ಲಿ ಕಾಣಿಸಿದ ಗಮ್ಯದ ಸುಳಿವು

14

ಪೊಲೀಸ್ ಕಾನ್‌ಸ್ಟೆಬಲ್ ಕುಮಾರ್ ಮಾಯಣ್ಣನ ಬಳಿ ಬಂದು, ತನಿಖೆಗಾಗಿ ಎಡಿಜಿಪಿ ತ್ರಿವೇದಿ ಸಾಹೇಬರು ಬರುವ ವಿಚಾರ ತಿಳಿಸಿದ. ಎಲ್ಲ ದಾಖಲೆಗಳನ್ನು ರೆಡಿ ಇಡುವಂತೆ ಮಾಯಣ್ಣ ತನ್ನ ಸಿಬ್ಬಂದಿಗೆ ಸೂಚಿಸಿದ.

ತಿಳಿಸಿದ್ದ ಸಮಯಕ್ಕೆ ಇಬ್ಬರು ಸಾಹೇಬರು ಬಂದು ಎಲ್ಲಾ ದಸ್ತಾವೇಜು, ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತಮ್ಮ ಸಲಹೆ–ಸೂಚನೆ, ಟೀಕೆ–ಟಿಪ್ಪಣಿಗಳನ್ನು ದಾಖಲಿಸಿ, ಕೊನೆಗೆ ಎಡಿಜಿಪಿ ಸಾಹೇಬರು ಅಮ್ಮು ಕೊಲೆಯ ತನಿಖೆಯ ವಿಷಯಕ್ಕೆ ಬಂದಿದ್ದರು.

‘ಬೋಲೊ ಇತನಾ ಸಬೂತ್ ಮಿಲ್‌ನೇಕೆ ಬಾದ್ ಬಿ ವೊ ಸಸ್ಪೆಕ್ಟ್ಸ್ ಕೊ ಕ್ಯೋ ಚೋಡ್ ದಿಯ... ಸುನಾ ಹೈ ತುಮ್ ಏಕ್ ಅಕಲ್ಮನ್ ಆಫೀಸರ್ ಹೊ... ಫಿರ್ ಬಿ...’

‘ಸರ್ ಐ ಡೋಂಟ್ ಸ್ಪೀಕ್ ಹಿಂದಿ... ಕೆನ್ ವಿ ಪ್ಲೀಸ್ ಕಾನ್ವರ್ಸ್ ಇನ್ ಕನ್ನಡ ಆರ್ ಇಂಗ್ಲಿಷ್...?’

‘ಹಾಂ... ತುಮ್ ಲೋಗ್ ಹಿಂದಿ ಸೀಕ್ನೆ ಕೆ ಬಿನಾ ಕೈಸೆ ಸಚ್ಚೆ ಹಿಂದೂಸ್ತಾನಿ ಬನೊಗೆ... ಕಮ್ ಸೆ ಕಮ್ ಕೋಶಿಶ್ ತೊ ಕರ್ನಾ ಹೈ ನಾ...?’

‘ಐ ಡೋಂಟ್ ಅಗ್ರೀ ವಿತ್ ಯುವರ್ ವ್ಯೂ ಪಾಯಿಂಟ್ ಸರ್... ವಿ ಕೆನ್ ಬಿ ಹಿಂದೂಸ್ತಾನೀಸ್ ಈವೆನ್ ವಿತೌಟ್ ಸ್ಪೀಕಿಂಗ್ ಹಿಂದಿ...’

ಮಾಯಣ್ಣನ ನೇರ ಪ್ರತ್ಯುತ್ತರಕ್ಕೆ ಅವಾಕ್ಕಾಗಿ ಕೈ ಕೈ ಹಿಸುಕಿಕೊಳ್ಳುತ್ತಿದ್ದರು ಎಸ್.ಪಿ. ಸಾಹೇಬರು.

‘ಓಕೆ, ದೆನ್ ಐ ಕೆನ್ ಸ್ಪೀಕ್ ಕನ್ನಡ... ಬಟ್ ದೆರ್ ಕೆನ್ ಬಿ ಸಮ್ ಮಿಸ್ಟೇಕ್ಸ್... ಹೇಳಿ... ನನ್ನ ಸವಾಲ್‌ಗೆ ಉತ್ತರ ಹೇಳಿ’.

‘ಸರ್, ಮೂವರು ಪ್ರಮುಖ ಶಂಕಿತ ಆರೋಪಿಗಳಿದ್ದಾರೆ, ಜೊತೆಗೆ ಇನ್ನಿಬ್ಬರು ಶಂಕಿತರು ಸಹ ಇದ್ದಾರೆ. ಇವರೆಲ್ಲರಿಗೂ ಈ ಕೊಲೆ ಮಾಡಲು ಬಲವಾದ ಕಾರಣಗಳಿವೆ. ಸಾಕಷ್ಟು ಸಾಕ್ಷಿ ಪುರಾವೆಗಳನ್ನು ಕಲೆ ಹಾಕಿದ್ದೀವಿ. ಆದರೆ ನನಗಿನ್ನೂ ಸ್ವಲ್ಪ ಕ್ಲಾರಿಟಿ ಬೇಕು. ಫೋರೆನ್ಸಿಕ್ ಲ್ಯಾಬ್ ರಿಪೋರ್ಟ್ ಬರೋದು ತುಂಬಾ ತಡ ಆಗ್ತಿದೆ. ಸೋ, ಐ ಡೋಂಟ್ ವಾಂಟ್ ಟು ಜಂಪ್ ಅಂಡ್ ಆಕ್ಟ್ ಸರ್’.

‘ಪ್ಲೀಸ್ ಗೀವ್ ಎ ಲಿಟಲ್ ಮೋರ್ ಟೈಮ್’.

‘ನಾಳೆ ನನ್ನ ಆಫೀಸ್‌ಗೆ ಬನ್ನಿ. ಈ ಕೇಸ್ ಡಿಸ್ಕಸ್ ಮಾಡೋದು ಇದೆ’.

‘ನನಗೆ ನಾಳೆ ರಜಾ ಬೇಕಿದೆ ಸರ್...’

‘ನಿಮಗೆ ಗೊತ್ತಿದೆಯ, ನಮ್ಮ ಪೊಲೀಸ್ ಡಿಪಾರ್ಟ್‌ಮೆಂಟ್ ಕ್ರೆಡಿಬಿಲಿಟಿ ಎಷ್ಟು ಡೌನ್ ಇದೆ ಅಂತ, ಬಿಕಾಸ್ ಕನ್ವಿಕ್ಷನ್ ರೇಟ್ ಡೌನ್ ಇದೆ’.

ಪೇದೆ ಭುಜಂಗನ ಕಡೆ ನೋಡುತ್ತಾ, ‘ಏನು ಕನ್ವಿಕ್ಷನ್ ರೇಟ್ ಅಂದರೆ?’

ಸುಮ್ಮನೆ ನಿಂತ ಭುಜಂಗನನ್ನು ಕುರಿತು–

‘ನಾವು ನೂರು ಜನರ

